ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 19 ನೇ ಮಾರ್ಚ್, 2020

2011 ರಲ್ಲಿ ಕೆ.ಪಿ.ಎಸ್.ಸಿ. ಇಂದ ಆಯ್ಕೆಯಾಗಿರುವ ಅಭ್ಯರ್ಥಿಗಳ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

1324 (1459) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2011ರಲ್ಲಿ ಕೆ.ಪಿ.ಎಸ್.ಸಿ ಮೂಲಕ ಆಯ್ಕೆಯಾಗಿರುವ 362 ಕೆ.ಎ.ಎಸ್. ಅಭ್ಯರ್ಥಿಗಳ ಕುರಿತು ಸರ್ಕಾರದ ನಿಲುವೇನು; ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದೇ ;

(ಆ) ಪ್ರಸ್ತುತ ಕೆ.ಪಿ.ಎಸ್.ಸಿ. ಮೂಲಕ ಹೊಸದಾಗಿ ಅರ್ಜಿ ಕರೆಯಲಾಗುವ ಗೆಜೆಟೆಡ್ ಹುದ್ದೆಗಳೊಂದಿಗೆ 2011ರಲ್ಲಿ ಆಯ್ಕೆಯಾಗಿರುವ 362 ಹುದ್ದೆಗಳನ್ನು ಸೇರಿಸಿ ಹೊಸದಾಗಿ ಅಷ್ಟು ಹುದ್ದೆಗಳಿಗೆ ಅರ್ಜಿ ಕರೆಯುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;

(ಇ) 2011ರಲ್ಲಿ ಕೆ.ಪಿ.ಎಸ್.ಸಿ ಮೂಲಕ ಆಯ್ಕೆಯಾಗಿರುವ ಎಲ್ಲಾ 362 ಕೆ.ಎ.ಎಸ್. ಅಭ್ಯರ್ಥಿಗಳ ಆಯ್ಕೆಯೂ ಭ್ರಷ್ಟಾಚಾರದ ಮೂಲಕವೇ ಆಗಿದೆ ಎಂದು ಸರ್ಕಾರ ನಿರ್ದರಿಸಿದೆಯೇ; ಭ್ರಷ್ಟಾಚಾರ ನಡೆಸಿದ ಎಷ್ಟು ಅಭ್ಯರ್ಥಿಗಳ ಮೇಲೆ ಕೇಸು ದಾಖಲಾಗಿದೆ ?